# ಕೃಷಿ ವಿಶ್ವವಿದ್ಯಾನಿಲಯ, ಬೆಂಗಳೂರು

## ಕೃಷಿ ಮಹಾವಿದ್ಯಾಲಯ, ಗಾ.ಕೃ.ವಿ.ಕೇ., ಬೆಂಗಳೂರು – 65

## ಸ್ಟೂಡೆಂಟ್ – ರೆಡಿ ಕಾರ್ಯಕ್ರಮದಡಿ – 2021

### ಅಂತಿಮ ವರ್ಷದ ಬಿ.ಎಸ್ಸಿ. (ಆನರ್ಸ್) ಕೃಷಿ, ಬಿ.ಎಸ್ಸಿ. (ಆನರ್ಸ್) ಕೃಷಿ ಮಾರಾಟ ಮತ್ತು ಸಹಕಾರ ಮತ್ತು ಬಿ.ಟೆಕ್. (ಕೃಷಿ ಇಂಜಿನಿಯರಿಂಗ್) ವಿದ್ಯಾರ್ಥಿಗಳ ಗ್ರಾಮೀಣ ಕೃಷಿ ಕಾರ್ಯಾನುಭವ ಕಾರ್ಯಕ್ರಮ – 2021

ಕರ್ನಾಟಕ ಸರ್ಕಾರದ ಕೃಷಿ ಆಯವ್ಯಯ ಪತ್ರ 2021–22 ರಲ್ಲಿ ನಿಗದಿಪಡಿಸಿರುವಂತೆ ಕೃಷಿ ಮಹಾವಿದ್ಯಾಲಯದ ಅಂತಿಮ ವರ್ಷದ ವಿದ್ಯಾರ್ಥಿಗಳು ತಮ್ಮ ಗ್ರಾಮೀಣ ಕೃಷಿ ಕಾರ್ಯಾನುಭವ ಪಡೆಯುವ ಕಾರ್ಯಕ್ರಮದಡಿಯಲ್ಲಿ 13 ವಾರಗಳ ಕಾಲ ಮುಂಗಾರು ಹಂಗಾಮಿಗೆ ಸರಿಹೊಂದುವಂತೆ ರೈತ ಸಂಪರ್ಕ ಕೇಂದ್ರ ಮತ್ತು ಅದರ ವ್ಯಾಪ್ತಿಯಲ್ಲಿ ಬರುವ ಹಳ್ಳಿಗಳಲ್ಲಿ ರೈತರೊಂದಿಗೆ ಕೃಷಿ ವಿಸ್ತರಣಾ ಕಾರ್ಯಕ್ರಮಗಳನ್ನು ನಡೆಸಲು ನಿಯೋಜಿಸಲಾಗಿದೆ. ಈ ವರ್ಷದ ಮೊದಲನೆಯ ಸೆಮಿಸ್ಟರ್ 19.07.2021ಕ್ಕೆ ಪ್ರಾರಂಭಗೊಂಡು 15.12.2019ಕ್ಕೆ ಮುಗಿಯುತ್ತದೆ. ಸುಮಾರು 15 ರಿಂದ 20 ವಿದ್ಯಾರ್ಥಿಗಳು ದಿನಾಂಕ 02.08.2021 ರಿಂದ 06.08.2021 ರವರೆಗೆ ಆಯ್ದ ರೈತ ಸಂಪರ್ಕ ಕೇಂದ್ರಗಳ ವ್ಯಾಪ್ತಿಯ ರೈತರಿಂದ ಮಾಹಿತಿ ಸಂಗ್ರಹಣೆ ಮಾಡಿ, ದಿನಾಂಕ 24.10.2019 ರವರೆವಿಗೂ ಗ್ರಾಮಗಳಲ್ಲಿ ಪ್ರಾಯೋಗಿಕ ವಿಸ್ತರಣೆಗಳ ಕಾರ್ಯಕ್ಕೆ ನಿಯೋಜಿಸಲಾಗಿದೆ. ಈ ಅವಧಿಯಲ್ಲಿ ವಿದ್ಯಾರ್ಥಿಗಳು ರೈತ ಸಂಪರ್ಕ ಕೇಂದ್ರ ಹಾಗೂ ಹತ್ತಿರದ ಹಳ್ಳಿಯಲ್ಲಿ ತೆಗೆದುಕೊಳ್ಳುವ ಚಟುವಟಿಕೆಗಳ ವಿವರಣೆಯನ್ನು ಇಲ್ಲಿ ಕೊಡಲಾಗಿದೆ.

| ಭಾಗ: 1 | ರೈತ ಸಂಪರ್ಕ ಕೇಂದ್ರದಲ್ಲಿ 02.08.2021 ರಿಂದ 24.10.2021 ರವರೆಗೆ ನಿರ್ವಹಿಸುವ ಕೆಲಸಗಳು |
|---|---|
| ಇಬ್ಬರು ವಿದ್ಯಾರ್ಥಿಗಳು ಪ್ರತಿದಿನ ಸರದಿಯ ಮೇರೆಗೆ ರೈತ ಸಂಪರ್ಕ ಕೇಂದ್ರದ ಸಿಬ್ಬಂದಿ ಸೂಚಿಸುವ ಕೆಲಸಗಳನ್ನು ನಿರ್ವಹಿಸುವುದರ ಜೊತೆಗೆ ಅಲ್ಲಿಗೆ ಬರುವ ರೈತರಿಗೆ ತಾಂತ್ರಿಕ ಮಾಹಿತಿಯನ್ನು ಒದಗಿಸುತ್ತಾರೆ. | |

| ಭಾಗ: 2 | ರೈತ ಸಂಪರ್ಕ ಕೇಂದ್ರ ಅಥವಾ ವಾಸವಿರುವ ಹಳ್ಳಿಯಲ್ಲಿ ಮತ್ತು ಸುತ್ತಮುತ್ತಲಿನ ಹಳ್ಳಿಗಳಲ್ಲಿ ಪ್ರತಿವಾರ ತೆಗೆದುಕೊಳ್ಳುವ ಕೆಲಸಗಳು (15–20 ವಿದ್ಯಾರ್ಥಿಗಳು) | |
|---|---|---|
| ಕ್ರ. ಸಂ. | ಚಟುವಟಿಕೆ | ಬಳಸುವ ವಿಸ್ತರಣಾ ಪದ್ಧತಿ |
| 1ನೇ ವಾರ (02.08.21–08.08.21) | | |
| 1. | ಆಯ್ದ ಗ್ರಾಮಗಳಲ್ಲಿ ಕೃಷಿ ಸ್ಥಿತಿಗತಿಗಳನ್ನು ತಿಳಿಯಲು ಮಾಹಿತಿ ಸಂಗ್ರಹಣೆ, ವಿಶ್ಲೇಷಣೆ ಹಾಗೂ ಕೃಷಿ ಸಮಸ್ಯೆಗಳನ್ನು ಗುರುತಿಸುವುದು.<br>ಪ್ರತಿ ವಿದ್ಯಾರ್ಥಿ ಐದು ಜನ ರೈತರನ್ನು ಆಯ್ಕೆ ಮಾಡಿ (ಅವರಲ್ಲಿ ತಲಾ ಇಬ್ಬರು ದೊಡ್ಡ, ಸಣ್ಣ ಹಾಗೂ ಒಬ್ಬ ಅತಿ ಸಣ್ಣ ರೈತರು ಇರಬೇಕು) ಅವರಿಂದ ಕೃಷಿಗೆ ಸಂಬಂಧಿಸಿದ ವಿವರವಾದ ಮಾಹಿತಿಯನ್ನು ಸಂಗ್ರಹಿಸಿ, ವಿಶ್ಲೇಷಿಸಿ ಅವರಿಗೆ ಸರಿಹೊಂದುವಂತಹ ಪರ್ಯಾಯ ಬೆಳೆ ಯೋಜನೆಗಳನ್ನು ರೂಪಿಸಬೇಕು | ಸಹಭಾಗಿತ್ವದ ಮುಖೇನ ಗ್ರಾಮೀಣ ಸಮೀಕ್ಷೆ (ಪಿ.ಆರ್.ಎ.) |
| 2. | ವಿದ್ಯಾರ್ಥಿಗಳು ರೈತ ಸಂಪರ್ಕ ಕೇಂದ್ರದ ಸಿಬ್ಬಂದಿ ಜೊತೆ ಬೆರೆತು ಕೈಗೊಳ್ಳಬೇಕಾಗಿರುವ ಚಟುವಟಿಕೆಗಳ ಬಗ್ಗೆ ಚರ್ಚಿಸಿ ಅಂತಿಮಗೊಳಿಸುವುದು ಹಾಗೂ ರೈತರಿಗೆ ಆಧುನಿಕ ತಾಂತ್ರಿಕತೆಗಳ ಸಾಮರ್ಥ್ಯ ಹೆಚ್ಚಿಸಲು ವಿವಿಧ ವಿಸ್ತರಣ ಪದ್ಧತಿಗಳ ಬಳಕೆ ಮಾಡಲು ಹಾಗೂ ವಸ್ತು ಸ್ಥಿತಿಯನ್ನು ತಿಳಿಯಲು ಯೋಜನೆಯನ್ನು ರೂಪಿಸಲಾಗುವುದು | ಸಾಮಾನ್ಯ ಸಭೆ, ಚರ್ಚೆ, ಭೇಟಿ |
| 2ನೇ ವಾರ (09.08.21–15.08.21) | | |
| 3. | ಆಯಾ ಭಾಗದ ಪ್ರಮುಖ ಬೆಳೆಗಳಲ್ಲಿ ಗುರುತಿಸಿದ ತಾಂತ್ರಿಕ ಸಮಸ್ಯೆಗಳು ಹಾಗೂ ಅವುಗಳ ಸುಧಾರಣೆಗೆ ಇರುವ ಅವಕಾಶಗಳು ಮತ್ತು ವಿಧಾನಗಳು | ಸಾಮಾನ್ಯ ಸಭೆ<br>ಗುಂಪು ಚರ್ಚಾಸಭೆ |
| 4. | ಮಣ್ಣಿನ ಹಾಗೂ ನೀರಿನ ಮಾದರಿಗಳನ್ನು ತೆಗೆದು ಪರೀಕ್ಷೆಗೆ ಕಳುಹಿಸುವುದು | ಮಾದರಿ ಸಂಗ್ರಹಣೆ/ಪದ್ಧತಿ ಪ್ರಾತ್ಯಕ್ಷಿಕೆ |
| 5. | ಬೆಳೆಯುಳಿಕೆ/ ತ್ಯಾಜ್ಯ ವಸ್ತುಗಳನ್ನು ಬಳಸಿ ಉತ್ತಮ ಸಾವಯವ ಗೊಬ್ಬರ (ಎಫ್‌ವೈಎಂ/ಕಾಂಪೋಸ್ಟ್) ತಯಾರಿಸುವುದು | ಗುಂಪು ಚರ್ಚಾಸಭೆ ಮತ್ತು ಪದ್ಧತಿ ಪ್ರಾತ್ಯಕ್ಷಿಕೆ |
| 6. | ಆಯಾ ಭಾಗದ ಪ್ರದೇಶದಲ್ಲಿ ಬೆಳೆಯುವ ಬೆಳೆಗಳಿಗೆ ಬೇಕಾಗಿರುವ ಪರಿಕರಗಳು, ಅವುಗಳ ಪ್ರಮಾಣ, ದೊರೆಯುವ ಸ್ಥಳ, ಬೆಲೆ, ಇತ್ಯಾದಿಗಳ ನಿರ್ಧಾರ | ಗುಂಪು ಚರ್ಚಾಸಭೆ |
| 7. | ಲಭ್ಯವಿರುವ ಆಧುನಿಕ ಹಾಗೂ ಸೂಕ್ತ ಕೃಷಿ ಸಲಕರಣೆಗಳು/ಯಂತ್ರೋಪಕರಣಗಳು, ಉಪಯೋಗಗಳು. | ಗುಂಪು ಚರ್ಚೆ |
| 8. | ವಿವಿಧ ಬೆಳೆಗಳ ಬೇಸಾಯಕ್ಕೆ ತಗಲುವ ಖರ್ಚಿನ ಅಂದಾಜು ಹಾಗೂ ಹಣ ಕ್ರೋಢೀಕರಿಸುವಿಕೆಗೆ ಇರುವ ಅವಕಾಶಗಳು | ಗುಂಪು ಚರ್ಚೆ |
| 9. | ಮಾಹಿತಿ ಕೇಂದ್ರ ಮತ್ತು ಬೆಳೆ ಪ್ರಾತ್ಯಕ್ಷಿಕೆ ಆಯೋಜನೆ | |
| 3ನೇ ವಾರ (09.9.21–15.09.21) | | |
| 10. | ವಿವಿಧ ಇಲಾಖೆಗಳಿಂದ ದೊರೆಯುವ ಸೌಲಭ್ಯಗಳ ಬಗ್ಗೆ ಪರಿಚಯ | ಗುಂಪು ಚರ್ಚಾಸಭೆ |
| 11. | ಬಿತ್ತನೆಗೆ ಬಳಸುವ ಬೀಜಗಳ ಗುಣಮಟ್ಟ ನಿರ್ಧರಿಸಲು ಕೈಗೊಳ್ಳಬಹುದಾದ ವಿಧಾನಗಳು (ಉದಾ. ಮೊಳಕೆಯೊಡೆಯುವಿಕೆಯ ಮಟ್ಟ/ಕಲಬೆರಕೆ) | ಪದ್ಧತಿ ಪ್ರಾತ್ಯಕ್ಷಿಕೆ |
| 12. | ಮುಂಗಾರು ಹಂಗಾಮಿನ ಬೇಸಾಯಕ್ಕೆ ಬೇಕಾಗಿರುವ ಪರಿಕರಗಳು, ಪ್ರಮಾಣ ಮತ್ತು ಅವುಗಳನ್ನು ಪಡೆಯುವ ಸಮಯ ಹಾಗೂ ಇರುವ ಅವಕಾಶಗಳು | ಗುಂಪು ಚರ್ಚಾಸಭೆ |

| | | |
|---|---|---|
| 13. | ಸ್ಥಳೀಯವಾಗಿ ದೊರೆಯುವ ಅರಣ್ಯ/ ತೋಟಗಾರಿಕೆ/ ತರಕಾರಿ ಬೆಳೆಗಳ ಬೀಜ ಸಂಗ್ರಹಣೆ ಮಾಡಿ ಸಸಿಗಳನ್ನು ಬೆಳೆಸುವುದು (ನರ್ಸರಿ) | ಗುಂಪು ಚರ್ಚಾಸಭೆ |
| 14. | ಬೆಳೆಗಳಿಗೆ ಬೇಕಾಗಿರುವ ಪೋಷಕಾಂಶಗಳು, ಅವುಗಳ ಪ್ರಾಮುಖ್ಯತೆ ಹಾಗೂ ಅವು ದೊರೆಯುವ ಮೂಲ | ಗುಂಪು ಚರ್ಚಾಸಭೆ |
| 15. | ಎರೆಹುಳುವಿನ ಗೊಬ್ಬರದ ಮಹತ್ವ ಹಾಗೂ ತಯಾರಿಕೆ | ಗುಂಪು ಚರ್ಚೆ, ಪ್ರಾತ್ಯಕ್ಷಿಕೆ |
| 16. | ಮಣ್ಣು ಪರೀಕ್ಷೆ ಆಧಾರದ ಮೇಲೆ ವಿವಿಧ ಬೆಳೆಗಳಿಗೆ ಒದಗಿಸಬೇಕಾಗಿರುವ ಸಾವಯವ, ರಾಸಾಯನಿಕ ಹಾಗೂ ಇತರೆ ವಸ್ತುಗಳ ಪ್ರಮಾಣದ ನಿರ್ಧಾರ | ಗುಂಪು ಚರ್ಚಾಸಭೆ |
| 17. | ಸಾವಯವ, ರಾಸಾಯನಿಕ ಹಾಗೂ ಜೈವಿಕ ಗೊಬ್ಬರಗಳ ಸಮರ್ಪಕ ಬಳಕೆಗಾಗಿ ಅಳವಡಿಸಬೇಕಾದ ಕಾರ್ಯತಂತ್ರಗಳು | ಗುಂಪು ಚರ್ಚಾಸಭೆ<br>ಪದ್ಧತಿ ಪ್ರಾತ್ಯಕ್ಷಿಕೆ |
| 18. | ರಸಗೊಬ್ಬರಗಳ ಕಲಬೆರಕೆ ತಿಳಿಯುವ ಸರಳ ವಿಧಾನಗಳು | ಪದ್ಧತಿ ಪ್ರಾತ್ಯಕ್ಷಿಕೆ |
| **4ನೇ ವಾರ (9.9.21 – 15.9.21)** | | |
| 19. | ಬೀಜೋಪಚಾರ ಮಾಡುವ ವಿಧಾನ-ಜೈವಿಕ ಗೊಬ್ಬರಗಳು/ರೋಗ ತಡೆಯುವ ರಾಸಾಯನಿಕಗಳು | ಪದ್ಧತಿ ಪ್ರಾತ್ಯಕ್ಷಿಕೆ |
| 20. | ಬಿತ್ತನೆ ಬೀಜ ಬೆಳೆಯಲು ಇರುವ ಅವಕಾಶಗಳು ಹಾಗೂ ಆಸಕ್ತಿಯಿರುವ ರೈತರನ್ನು ಗುರುತಿಸುವಿಕೆ | ಗುಂಪು ಚರ್ಚಾಸಭೆ |
| 21. | ಸಮಗ್ರ ಬೆಳೆ ನಿರ್ವಹಣೆ ಮಹತ್ವ ಹಾಗೂ ಅನುಸರಿಸಬೇಕಾದ ವಿಧಾನಗಳ ಪರಿಚಯ | ಗುಂಪು ಚರ್ಚಾಸಭೆ |
| 22. | ಲಭ್ಯವಿರುವ ಆಧುನಿಕ ಯಂತ್ರೋಪಕರಣಗಳು/ಸಲಕರಣೆಗಳ ಬಳಕೆ ವಿಧಾನ | ಪದ್ಧತಿ ಪ್ರಾತ್ಯಕ್ಷಿಕೆ |
| 23. | ಆಯಾ ಭಾಗದ ಬೆಳೆಗಳಿಗೆ ತಗಲುವ ರೋಗಗಳು ಹಾಗೂ ಕೀಟಗಳ ಪರಿಚಯ ಹಾಗೂ ಕೈಗೊಳ್ಳಬೇಕಾಗಿರುವ ಮುನ್ನಚ್ಚರಿಕೆ ಕ್ರಮಗಳು | ಗುಂಪು ಚರ್ಚಾಸಭೆ |
| 24. | ಆಯ್ದ ಬೆಳೆಗಳಲ್ಲಿ ಬಿತ್ತನೆ ಬೀಜ ಬೆಳೆಯುವ ತಾಂತ್ರಿಕತೆಗಳ ವಿವರ | ಗುಂಪು ಚರ್ಚಾಸಭೆ, ಪ್ರಾತ್ಯಕ್ಷಿಕೆ |
| 25. | ಪ್ರತಿ ವಿದ್ಯಾರ್ಥಿ ತಾನು ಆಯ್ದ ಐದು ಜನ ರೈತರು ಮುಂಗಾರು ಹಂಗಾಮಿನಲ್ಲಿ ಕೈಗೊಳ್ಳುವ ಕೃಷಿ ಚಟುವಟಿಕೆಗಳ ಅನುಷ್ಠಾನ ಪ್ರಕ್ರಿಯೆಯಲ್ಲಿ ಸಕ್ರಿಯವಾಗಿ ಭಾಗವಹಿಸಿ ಅವರಿಗೆ ಸರಿಹೊಂದುವ ಪರ್ಯಾಯ ಬೆಳೆ ಯೋಜನೆ ಅಳವಡಿಸಲು ಪ್ರೇರಣೆ ಮಾಡುವುದು | ವೈಯಕ್ತಿಕ ಭೇಟಿ, ಗುಂಪು ಚರ್ಚೆ, ಪದ್ಧತಿ ಪ್ರಾತ್ಯಕ್ಷಿಕೆ |
| **5ನೇ ವಾರ (16.9.21 – 22.9.21)** | | |
| 26. | ಸಮಸ್ಯಾತ್ಮಕ ಮಣ್ಣು-ಕಾರಣಗಳು ಹಾಗೂ ಸುಧಾರಣೆ ವಿಧಾನಗಳು | ಭೇಟಿ, ಗುಂಪುಚರ್ಚೆ, ಪ್ರಾತ್ಯಕ್ಷಿಕೆ |
| 27. | ರೇಷ್ಮೆಹುಳು ಸಾಕುವ ಮನೆಯ ಮೂರು ಹಂತಗಳ ಸೋಂಕು ನಿವಾರಣೆ ಕ್ರಮಗಳು ಮತ್ತು ಚಾಕಿಹುಳು ನಿರ್ವಹಣೆ ಕ್ರಮಗಳು | ಗುಂಪು ಚರ್ಚಾಸಭೆ, ಪ್ರಾತ್ಯಕ್ಷಿಕೆ |
| 28. | ಬೇಕರಿ ತರಬೇತಿ | ತರಬೇತಿ |
| 29. | ವಿವಿಧ ಬೆಳೆಗಳ ಅನ್ವಹಿಸುವಂತಹ ಸಮಗ್ರ ನೀರು ನಿರ್ವಹಣೆ ಪದ್ಧತಿಗಳ ಅಳವಡಿಕೆ (ನೀರಾವರಿ ವಿನ್ಯಾಸ, ನೀರಾವರಿ ಪದ್ಧತಿ, ನೀರಿನ ಪ್ರಮಾಣ) | ಗುಂಪು ಚರ್ಚಾಸಭೆ, ಪ್ರಾತ್ಯಕ್ಷಿಕೆ |
| 30. | ವಿವಿಧ ಬೆಳೆಗಳಿಗೆ ಅನ್ವಹಿಸುವಂತಹ ಸಮಗ್ರ ಪೋಷಕಾಂಶಗಳ ನಿರ್ವಹಣೆ ಪದ್ಧತಿಗಳ ಅಳವಡಿಕೆ (ಸಾವಯವ, ಜೈವಿಕ ಹಾಗೂ ರಾಸಾಯನಿಕ ಮೂಲ) | ಗುಂಪು ಚರ್ಚಾಸಭೆ, ಪ್ರಾತ್ಯಕ್ಷಿಕೆ |
| 31. | ಬಿತ್ತನೆ ಬೀಜ, ತರಕಾರಿ, ಹೂ ಹಾಗೂ ಇತರೆ ಬೆಳೆಗಳ ತಾಕುಗಳಿಗೆ ಭೇಟಿ ನೀಡಿ ಬೆಳವಣಿಗೆ, ರೋಗ, ಕೀಟಬಾಧೆ ಇತ್ಯಾದಿ ಗಮನಿಸುವುದು ಹಾಗೂ ಸಲಹೆಗಳನ್ನು ನೀಡುವುದು | ಭೇಟಿ, ಗುಂಪು ಚರ್ಚೆ, ಪ್ರಾತ್ಯಕ್ಷಿಕೆ |
| 32. | ಹವಾಮಾನದಲ್ಲಿನ ಏರುಪೇರು/ ಮಳೆ ವೈಫಲ್ಯದಿಂದಾಗುವ ಪರಿಣಾಮಗಳಿಗೆ ಸರಿಹೊಂದುವಂತಹ ಬೆಳೆಯೋಜನೆಗಳನ್ನು ರೂಪಿಸುವುದು | ಗುಂಪು ಚರ್ಚೆ, ಯೋಜನೆ ತಯಾರಿ |
| 33. | ಕಳೆಗಳು, ಪೋಷಕಾಂಶಗಳು ಹಾಗೂ ನೀರು ಸಮಗ್ರ ನಿರ್ವಹಣೆ ಕ್ರಮಗಳು | ಗುಂಪು ಚರ್ಚಾಸಭೆ, ಪ್ರಾತ್ಯಕ್ಷಿಕೆ |
| 34. | ರಸಗೊಬ್ಬರಗಳ ಬಳಕೆಯ ಸಾಮರ್ಥ್ಯ ಹೆಚ್ಚಿಸುವ ವಿಧಾನಗಳು | ಗುಂಪು ಚರ್ಚೆ, ಪ್ರಾತ್ಯಕ್ಷಿಕೆ |
| **6ನೇ ವಾರ (23.9.21–06.10.21)** | | |
| 35. | ಕೃಷಿಯಲ್ಲಿ ಸಮರ್ಪಕ ನೀರು ನಿರ್ವಹಣೆ | ಗುಂಪು ಚರ್ಚಾಸಭೆ, ಪ್ರಾತ್ಯಕ್ಷಿಕೆ |
| 36. | ತೋಟಗಾರಿಕಾ ಸಸಿಗಳ ಪಾಲನೆ, ಕಸಿ ಮಾಡುವ ವಿಧಾನ ಹಾಗೂ ಸಸ್ಯ ಪಾಲನಾ ಘಟಕಗಳ ನಿರ್ವಹಣೆ | ಗುಂಪು ಚರ್ಚಾಸಭೆ, ಪ್ರಾತ್ಯಕ್ಷಿಕೆ |
| 37. | ಕೈತೋಟ/ಮನೆಯಂಗಳದಲ್ಲಿನ ತೋಟದ ಮಹತ್ವ ಹಾಗೂ ನಿರ್ವಹಣೆ | ಗುಂಪು ಚರ್ಚಾಸಭೆ, ಪ್ರಾತ್ಯಕ್ಷಿಕೆ |
| 38. | ವಿವಧ ಬೆಳೆಗಳಲ್ಲಿ ರೋಗ/ಕೀಟ ಬಾಧೆಯನ್ನು ಗಮನಿಸುವುದು, ಅವುಗಳ ತೀವ್ರತೆಯನ್ನು ಅಂದಾಜು ಮಾಡುವುದು, ಪರಭಕ್ಷಕಗಳ ಲಭ್ಯತೆಯನ್ನು ತಿಳಿದು ಸಮಗ್ರ ನಿರ್ವಹಣೆ ಪದ್ಧತಿಗಳ ಅಳವಡಿಕೆಗೆ ಮಾರ್ಗದರ್ಶನ | ಭೇಟಿ, ವಿಶ್ಲೇಷಣೆ |
| 39. | ಸಸ್ಯರಂಕ್ಷಣಾ ಸಿಂಪರಣಾ ದ್ರಾವಣ ಬಳಸುವಾಗ ಸುರಕ್ಷಿತ ಪದ್ಧತಿಗಳ ಅಳವಡಿಕೆ | ಗುಂಪು ಚರ್ಚೆ, ಪ್ರಾತ್ಯಕ್ಷಿಕೆ |
| 40. | ಸಾಮಾಜಿಕ/ಕೃಷಿ ಅರಣ್ಯಕ್ಕೆ ಸೂಕ್ತ ಗಿಡಗಳ ಆಯ್ಕೆ ಹಾಗೂ ನೆಡುವುದು | ಗುಂಪು ಚರ್ಚಾಸಭೆ, ಪ್ರಾತ್ಯಕ್ಷಿಕೆ |
| 41. | ರೈತ ಸಂಪರ್ಕ ಕೇಂದ್ರ ಆವರಣ ಅಥವಾ ಹತ್ತಿರದ ಹಳ್ಳಿಯಲ್ಲಿ ಎಲ್ಲಾ ವಿದ್ಯಾರ್ಥಿಗಳು ಸೇರಿ ಆಯಾ ಪ್ರದೇಶಕ್ಕೆ ಸರಿಹೊಂದುವಂತಹ ಕೃಷಿ ಆಂದೋಲನವನ್ನು (ಕ್ಯಾಂಪೈನ್) ಏರ್ಪಡಿಸುವುದು (ಉದಾ: ಪಶು ಆರೋಗ್ಯ ತಪಾಸಣೆ/ ಗಿಡ ನೆಡುವಿಕೆ/ ಮಣ್ಣು ಆರೋಗ್ಯ ಸುಧಾರಣೆ, ಇತ್ಯಾದಿ) | ಸೂಕ್ತ ವಿಸ್ತರಣಾ ಸಾಧನಗಳನ್ನು ಬಳಸುವುದು ಹಾಗೂ ಸಂಬಂಧಪಟ್ಟ |

| | | |
|---|---|---|
| | | ಇಲಾಖೆಗಳ ಸಹಯೋಗದಲ್ಲಿ ಆಂದೋಲನ |
| 42. | ಮಳೆ ನೀರು ಭೂಮಿಯಲ್ಲಿ ಹಿಂಗುವ ಕಾರ್ಯತಂತ್ರಗಳು ಹಾಗೂ ಭೂಮಿಯಲ್ಲಿ ತೇವಾಂಶ ಹಿಡಿದಿಟ್ಟುಕೊಳ್ಳಲು ಅನುಸರಿಸಬೇಕಾದ ವಿಧಾನಗಳು | ಗುಂಪು ಚರ್ಚಾಸಭೆ, ಪ್ರಾತ್ಯಕ್ಷಿಕೆ |
| 43. | ಸಮಗ್ರ ಜಲಾನಯನ ಅಭಿವೃದ್ಧಿಯಲ್ಲಿ ವಿವಿಧ ತಾಂತ್ರಿಕತೆಗಳು ಅಥವಾ ಮಳೆ ನೀರು ನಿರ್ವಹಣೆ | ಗುಂಪು ಚರ್ಚಾಸಭೆ, ಪ್ರಾತ್ಯಕ್ಷಿಕೆ ವಿಡಿಯೋ ಪ್ರದರ್ಶನ |
| **7ನೇ ವಾರ (07.10.21–13.10.21)** | | |
| 44. | ಬಿತ್ತನೆ ಬೀಜ, ತರಕಾರಿ, ಹೂ ಹಾಗೂ ಇತರೆ ಬೆಳೆಗಳ ತಾಕುಗಳಿಗೆ ಭೇಟಿ ನೀಡಿ ಬೆಳವಣಿಗೆ, ರೋಗ, ಕೀಟಬಾಧೆ ಇತ್ಯಾದಿ ಗಮನಿಸುವುದು ಹಾಗೂ ಸಾಧ್ಯವಾದರೆ ಸಲಹೆಗಳನ್ನು ನೀಡುವುದು ಅಥವಾ ತಜ್ಞರ ಸಹಾಯ ಪಡೆಯುವುದು | ಭೇಟಿ, ಗುಂಪು ಚರ್ಚೆ, ಪ್ರಾತ್ಯಕ್ಷಿಕೆ |
| 45. | ಅವಶ್ಯಕತೆಗಳಿಗೆ ಅನುಗುಣವಾಗಿ ಸಸ್ಯ ಚೋದಕಗಳನ್ನು ಬಳಸುವುದು | ಗುಂಪು ಚರ್ಚೆ, ಪ್ರಾತ್ಯಕ್ಷಿಕೆ |
| 46. | ಸಸ್ಯ ಸಂರಕ್ಷಣ ರಾಸಾಯನಿಕಗಳನ್ನು ಖರೀದಿ ಮಾಡುವಾಗ ಗಮನಿಸಬೇಕಾದ ಅಂಶಗಳು, ಅವುಗಳನ್ನು ಬಳಸಿದ ವಿವರಗಳು ಇತ್ಯಾದಿಗಳ ದಾಖಲಾತಿ ಇಡುವ ಅವಶ್ಯಕತೆ ಮತ್ತು ದಾಖಲಿಸುವ ರೀತಿ | ಗುಂಪು ಚರ್ಚೆ, ಪ್ರಾತ್ಯಕ್ಷಿಕೆ |
| 47. | ಮಣ್ಣು ಮತ್ತು ನೀರಿನ ಸಂರಕ್ಷಣೆ, ಬೆಳೆಪದ್ಧತಿ ಹಾಗೂ ಇತರೆ ಕೃಷಿ ಚಟುವಟಿಕೆಗಳ ದೇಶಿಯ ಪದ್ಧತಿಗಳನ್ನು (ಇಂಡಿಜಿನಸ್) ಪಟ್ಟಿ ಮಾಡುವುದು | ಭೇಟಿ, ಗುಂಪು ಚರ್ಚೆ ಹಾಗೂ ದಾಖಲಾತಿ |
| 48. | ರಸಗೊಬ್ಬರಗಳ ಬಳಕೆಯ ಸಾಮರ್ಥ್ಯ ಹೆಚ್ಚಿಸುವ ಕಾರ್ಯತಂತ್ರಗಳು | ಗುಂಪು ಚರ್ಚೆ, ಪ್ರಾತ್ಯಕ್ಷಿಕೆ |
| 49. | ಎರೆ ಹುಳುಗಳ ಸಮರ್ಥ ಪಾಲನೆ ಉಸ್ತುವಾರಿ | ಭೇಟಿ, ಗುಂಪು ಚರ್ಚೆ, ಪ್ರಾತ್ಯಕ್ಷಿಕೆ |
| 50. | ಅಣಬೆ ಬೇಸಾಯ ಕ್ರಮಗಳು | ಗುಂಪು ಚರ್ಚೆ, ಪ್ರಾತ್ಯಕ್ಷಿಕೆ |
| 51. | ಆಹಾರ ಪದಾರ್ಥಗಳಲ್ಲಿ ಕಲಬೆರಕೆಯಾಗಿರುವುದನ್ನು ಗುರುತಿಸುವ ವಿಧಾನಗಳು | ಗುಂಪು ಚರ್ಚೆ, ಪ್ರಾತ್ಯಕ್ಷಿಕೆ |
| 52. | ಹಾಲಿ ತೋಟದ ಬೆಳೆಗಳ (ಆರ್ಚರ್ಡ್ಸ್/ಪ್ಲಾಂಟೇಷನ್) ಸಮರ್ಥ ನಿರ್ವಹಣೆ | ಗುಂಪು ಚರ್ಚೆ, ಪ್ರಾತ್ಯಕ್ಷಿಕೆ |
| 53. | ವಿವಿಧ ಬೆಳೆಗಳಲ್ಲಿ ರೋಗ/ಕೀಟ ಭಾದೆಯನ್ನು ಗಮನಿಸುವುದು, ಅವುಗಳ ತೀವ್ರತೆಯನ್ನು ಅಂದಾಜು ಮಾಡುವುದು, ಪರಭಕ್ಷಕಗಳ ಲಭ್ಯತೆ/ತೀವ್ರತೆಯನ್ನು ತಿಳಿದು ಸಮಗ್ರ ನಿರ್ವಹಣೆ ಪದ್ಧತಿಗಳ ಅಳವಡಿಕೆಗೆ ಮಾರ್ಗದರ್ಶನ | ಭೇಟಿ, ಗುಂಪು ಚರ್ಚೆ, ಪ್ರಾತ್ಯಕ್ಷಿಕೆ |
| 54. | ಸಸ್ಯಸಂರಕ್ಷಣಾ ಸಿಂಪರಣಾ ದ್ರಾವಣ ಬಳಸುವಾಗ ಅನುಸರಿಸಬೇಕಾದ ಸುರಕ್ಷತ ಪದ್ಧತಿಗಳು ಹಾಗೂ ಪ್ರಥಮ ಚಿಕಿತ್ಸೆ ಬಗ್ಗೆ ಮಾಹಿತಿ | ಗುಂಪು ಚರ್ಚೆ, ಪ್ರಾತ್ಯಕ್ಷಿಕೆ |
| **8ನೇ ವಾರ (14.10.21–20.10.21)** | | |
| 55. | ಬಿತ್ತನೆ ಬೀಜ, ತರಕಾರಿ, ಹೂ ಹಾಗೂ ಇತರೆ ಬೆಳೆಗಳ ತಾಕುಗಳಿಗೆ ಭೇಟಿ ನೀಡಿ ಬೆಳವಣಿಗೆ, ರೋಗ, ಕೀಟಬಾಧೆ ಇತ್ಯಾದಿ ಗಮನಿಸುವುದು ಹಾಗೂ ಸಾಧ್ಯವಾದರೆ ಸಲಹೆಗಳನ್ನು ನೀಡುವುದು ಅಥವಾ ತಜ್ಞರ ಸಹಾಯ ಪಡೆಯುವುದು | ಭೇಟಿ, ಗುಂಪು ಚರ್ಚೆ, ಪ್ರಾತ್ಯಕ್ಷಿಕೆ |
| 56. | ಜೇನುಕೃಷಿ ಮಹತ್ವ, ಜೇನು ಸಾಕಣೆ | ಗುಂಪು ಚರ್ಚೆ, ಪ್ರಾತ್ಯಕ್ಷಿಕೆ, ಭೇಟಿ |
| 57. | ಸಮಗ್ರ ಕೃಷಿ ನಿರ್ವಹಣೆ ಮಾಡುವುದು | ಭೇಟಿ, ಗುಂಪು ಚರ್ಚೆ, ಪ್ರಾತ್ಯಕ್ಷಿಕೆ |
| 58. | ವಿವಿಧ ಬೆಳೆಗಳಲ್ಲಿ ರೋಗ/ಕೀಟ ಭಾದೆಯನ್ನು ಗಮನಿಸಿ, ಅವುಗಳ ತೀವ್ರತೆಯನ್ನು ಅಂದಾಜು ಮಾಡಿ, ಪರಭಕ್ಷಕಗಳ ಲಭ್ಯತೆ/ತೀವ್ರತೆಯನ್ನು ತಿಳಿದು ಸಮಗ್ರ ನಿರ್ವಹಣೆ ಪದ್ಧತಿಗಳ ಅಳವಡಿಕೆಗೆ ಮಾರ್ಗದರ್ಶನ ನೀಡುವುದು | ಭೇಟಿ, ಗುಂಪು ಚರ್ಚೆ, ಪ್ರಾತ್ಯಕ್ಷಿಕೆ |
| 59. | ಬೋರ್ಡೋದ್ರಾವಣ ತಯಾರಿಕೆ ಹಾಗೂ ಬಳಕೆ | ಗುಂಪು ಚರ್ಚೆ, ಪ್ರಾತ್ಯಕ್ಷಿಕೆ |
| 60. | ಸ್ಥಳೀಯವಾಗಿ ತಯಾರಿಸಬಹುದಾದ ಸಸ್ಯಸಂರಕ್ಷಕಗಳ ತಯಾರಿ ಹಾಗೂ ಬಳಕೆ (ಉದಾ: ಬೇವಿನ ಬೀಜದ ಕಷಾಯ, ಪಂಚಗವ್ಯ, ಬೀಜಾಮೃತ) | ಗುಂಪು ಚರ್ಚೆ, ಪ್ರಾತ್ಯಕ್ಷಿಕೆ |
| 61. | ಹೈಟೆಕ್ ತೋಟಗಾರಿಕೆ–ಮಹತ್ವ, ಬೇಕಾಗಿರುವ ಪರಿಕರಗಳು, ಹಣಕಾಸು ನಿರ್ವಹಣೆ ಹಾಗೂ ಇತರೆ ಸಾದಕ ಬಾದಕಗಳು ಹಾಗೂ ತಾಂತ್ರಿಕತೆಗಳು | ಗುಂಪು ಚರ್ಚೆ, ಪ್ರಾತ್ಯಕ್ಷಿಕೆ, ಭೇಟಿ |
| 62. | ರಸಗೊಬ್ಬರಗಳ ಬಳಕೆಯ ಸಾಮರ್ಥ್ಯ ಹೆಚ್ಚಿಸುವುದು | ಗುಂಪು ಚರ್ಚೆ, ಪ್ರಾತ್ಯಕ್ಷಿಕೆ |
| 63. | ಸಸ್ಯಸಂರಕ್ಷಣಾ ಸಿಂಪರಣಾ ದ್ರಾವಣ ಬಳಸುವಾಗ ಅನುಸರಿಸಬೇಕಾದ ಸುರಕ್ಷಿತ ಪದ್ಧತಿಗಳು | ಗುಂಪು ಚರ್ಚೆ, ಪ್ರಾತ್ಯಕ್ಷಿಕೆ |
| 64. | ಬಿತ್ತನೆ ಬೀಜಕ್ಕಾಗಿ ಬೆಳೆಯುವ ಬೆಳೆಗಳಲ್ಲಿ ಅನುಸರಿಸಬೇಕಾದ ತಾಂತ್ರಿಕತೆಗಳು – ಅಧಿಕ ಇಳುವರಿ/ಹೈಬ್ರಿಡ್/ತರಕಾರಿ ಬೆಳೆಗಳು | ಗುಂಪು ಚರ್ಚೆ, ಪ್ರಾತ್ಯಕ್ಷಿಕೆ |
| **9ನೇ ವಾರ (21.10.21–27.10.21)** | | |
| 65. | ಬಿತ್ತನೆ ಬೀಜ, ತರಕಾರಿ, ಹೂ ಹಾಗೂ ಇತರೆ ಬೆಳೆಗಳ ತಾಕುಗಳಿಗೆ ಭೇಟಿ ನೀಡಿ ಬೆಳವಣಿಗೆ, ರೋಗ, ಕೀಟಬಾಧೆ ಇತ್ಯಾದಿ ಗಮನಿಸುವುದು ಹಾಗೂ ಸಾಧ್ಯವಾದರೆ ಸಲಹೆಗಳನ್ನು ನೀಡುವುದು ಅಥವಾ ತಜ್ಞರ ಸಹಾಯ ಪಡೆಯುವುದು | ಭೇಟಿ, ಗುಂಪು ಚರ್ಚೆ, ಪ್ರಾತ್ಯಕ್ಷಿಕೆ |

| | | |
|---|---|---|
| 66. | ಬಿತ್ತನೆ ಬೀಜಕ್ಕೆ ಸಂಬಂಧಿಸಿದ ಪಿಪಿವಿ ಹಾಗೂ ಎಫ್‌ಆರ್ 2001 ಕಾಯ್ದೆಗಳನ್ನು ರೈತರಿಗೆ ಮನವರಿಕೆ ಮಾಡುವುದು | ಗುಂಪುಚರ್ಚೆ |
| 67. | ಸಂಗ್ರಹಣೆ ಮಾಡಿದ ದವಸ ಧಾನ್ಯಗಳಲ್ಲಿ ಪೀಡೆ ನಿರ್ವಹಣೆ | ಗುಂಪು ಚರ್ಚೆ, ಪ್ರಾತ್ಯಕ್ಷಿಕೆ |
| 68. | ಬಿತ್ತನೆ ಬೀಜಗಳನ್ನು ಬದಲಿಮಾಡುವ (ರಿಪ್ಲೇಸ್‌ಮೆಂಟ್) ಸಮಯ/ಅಂತರ | ಗುಂಪುಚರ್ಚೆ |
| 69. | ಮೌಲ್ಯವರ್ಧಿತ ಉತ್ಪನ್ನಗಳ ತಯಾರಿ ಹಾಗೂ ಮಾರಾಟ | ಗುಂಪು ಚರ್ಚೆ, ಪ್ರಾತ್ಯಕ್ಷಿಕೆ |
| 70. | ವಿವಿಧ ಬೆಳೆಗಳಲ್ಲಿ ರೋಗ/ಕೀಟ ಭಾದೆಯನ್ನು ಗಮನಿಸಿ, ಅವುಗಳ ತೀವ್ರತೆಯನ್ನು ಅಂದಾಜು ಮಾಡಿ, ಪರಭಕ್ಷಕಗಳ ಲಭ್ಯತೆ/ತೀವ್ರತೆಯನ್ನು ತಿಳಿದು ಸಮಗ್ರ ನಿರ್ವಹಣೆ ಪದ್ಧತಿಗಳ ಅಳವಡಿಕೆಗೆ ಮಾರ್ಗದರ್ಶನ ನೀಡುವುದು | ಭೇಟಿ, ಗುಂಪು ಚರ್ಚೆ, ಪ್ರಾತ್ಯಕ್ಷಿಕೆ |
| 71. | ಸ್ವಸಹಾಯ ಗುಂಪುಗಳು ಉದಾ: ಸ್ತ್ರೀಶಕ್ತಿ, ಸ್ವಸಹಾಯ ಗುಂಪು ಇತ್ಯಾದಿ ಕಮಾಡಿಟಿ ಇಂಟ್ರೆಸ್ಟ್ ಗುಂಪುಗಳ (ಉದಾ: ಬೈವೋಲ್ಟೇನ್ ರೇಷ್ಮೆ ಬೆಳೆಗಾರರ ಸಂಘ) ಮಹತ್ವ ಹಾಗೂ ರಚಿಸುವ ವಿಧಾನ | ಗುಂಪು ಚರ್ಚಾಸಭೆ, ಅನುವುಗಾರರ ಬಳಕೆ |
| **10ನೇ ವಾರ (28.10.21–03.11.21)** | | |
| 72. | ರೈತ ಸಂಪರ್ಕ ಕೇಂದ್ರ ಆವರಣ ಅಥವಾ ಹಳ್ಳಿಯಲ್ಲಿ ಎಲ್ಲಾ ವಿದ್ಯಾರ್ಥಿಗಳು ಸೇರಿ ಕೃಷಿ ವಿಷಯಗಳಿಗೆ ಸಂಬಂಧಿಸಿದ ರೈತರಿಗೆ ತರಬೇತಿ ಕಾರ್ಯಕ್ರಮ ಏರ್ಪಡಿಸುವುದು | ತಜ್ಞರು, ಅನುಭವಸ್ಥ ರೈತರು, ಅನುವುಗಾರರು ಇಂತಹವರನ್ನು ಬಳಸಿ ತರಬೇತಿ ಕೊಡುವುದು |
| 73. | ಅಜೋಲ ಉತ್ಪಾದನೆ ಪ್ರಾತ್ಯಕ್ಷಿಕೆ ಏರ್ಪಡಿಸುವುದು | ಪದ್ಧತಿ/ಪರಿಣಾಮ ಪ್ರಾತ್ಯಕ್ಷಿಕೆ |
| 74. | ವಿವಿಧ ಬೆಳೆಗಳಲ್ಲಿ ರೋಗ/ಕೀಟ ಭಾದೆಯನ್ನು ಗಮನಿಸಿ, ಅವುಗಳ ತೀವ್ರತೆಯನ್ನು ಅಂದಾಜು ಮಾಡಿ, ಪರಭಕ್ಷಕಗಳ ಲಭ್ಯತೆ/ತೀವ್ರತೆಯನ್ನು ತಿಳಿದು ಸಮಗ್ರ ನಿರ್ವಹಣೆ ಪದ್ಧತಿಗಳ ಅಳವಡಿಕೆಗೆ ಉತ್ತೇಜಿಸುವುದು | ಭೇಟಿ, ಗುಂಪುಚರ್ಚೆ, ಪ್ರಾತ್ಯಕ್ಷಿಕೆ, ಪಶು ಚಿಕಿತ್ಸಾ ಶಿಬಿರ/ಆಂದೋಲನ |
| 75. | ಸ್ಥಳೀಯವಾಗಿ ಲಭ್ಯವಿರುವ ಉತ್ಪನ್ನಗಳಿಂದ ಪೌಷ್ಟಿಕ ಆಹಾರ ತಯಾರಿ ಹಾಗೂ ವಿವಿಧ ವಯಸ್ಸಿನವರಿಗೆ ಸಮತೋಲನ ಆಹಾರ ತಯಾರಿ ವಿಧಾನಗಳು | ಗುಂಪುಚರ್ಚಾಸಭೆ, ಪ್ರಾತ್ಯಕ್ಷಿಕೆ |
| **11ನೇ ವಾರ (04.11.21 – 10.11.21)** | | |
| 76. | ರೈತ ಸಂಪರ್ಕ ಕೇಂದ್ರದ ಆವರಣ ಅಥವಾ ಹಳ್ಳಿಯಲ್ಲಿ ಎಲ್ಲಾ ವಿದ್ಯಾರ್ಥಿಗಳು ಸೇರಿ ಆಯಾ ಪ್ರದೇಶಗಳಿಗೆ ಸರಿಹೊಂದುವ ವಿಷಯದ ಬಗ್ಗೆ ವಿಚಾರ ವಿನಿಮಯ ಕಾರ್ಯಕ್ರಮ (ಇಂಟರ್ಯಾಕ್ಷನ್ ಸೆಷನ್) ಏರ್ಪಡಿಸುವುದು | ತಜ್ಞರು, ಅನುಭವಸ್ಥ ರೈತರು, ಅನುವುಗಾರರು ಇಂತಹವರನ್ನು ಬಳಸಿಕೊಳ್ಳುವುದು |
| 77. | ಉತ್ಪನ್ನಗಳನ್ನು ವರ್ಗೀಕರಣ ಹಾಗೂ ಪ್ಯಾಕಿಂಗ್ ಮಾಡುವ ವಿಧಾನಗಳು | ಗುಂಪುಚರ್ಚೆ, ಪ್ರಾತ್ಯಕ್ಷಿಕೆ, ರೈತ ತರಬೇತಿ |
| 78. | ವಿವಿಧ ಬೆಳೆಗಳಲ್ಲಿ ರೋಗ/ಕೀಟ ಭಾದೆಯನ್ನು ಗಮನಿಸಿ, ಅವುಗಳ ತೀವ್ರತೆಯನ್ನು ಅಂದಾಜು ಮಾಡಿ, ಪರಭಕ್ಷಕಗಳ ಲಭ್ಯತೆ/ತೀವ್ರತೆಯನ್ನು ತಿಳಿದು ಸಮಗ್ರ ನಿರ್ವಹಣೆ ಪದ್ಧತಿಗಳ ಅಳವಡಿಕೆಗೆ ಉತ್ತೇಜಿಸುವುದು | ಭೇಟಿ, ಗುಂಪುಚರ್ಚೆ, ಪ್ರಾತ್ಯಕ್ಷಿಕೆ, ಕೃಷಿ ವಸ್ತು ಪ್ರದರ್ಶನ |
| 79. | ಕೇಂದ್ರ ಅಥವಾ ವಿದ್ಯಾರ್ಥಿಗಳಿಗೆ ವಿವಿಧ ಇಲಾಖೆಗಳ ಸಹಯೋಗದೊಂದಿಗೆ ರೈತ ಸಂಪರ್ಕ ಕೇಂದ್ರ ಇರುವ ಹಳ್ಳಿಯಲ್ಲಿ ಕೃಷಿ ವಸ್ತು ಪ್ರದರ್ಶನ ಏರ್ಪಡಿಸುವುದು | |
| **12ನೇ ವಾರ (11.11.21 – 17.11.21)** | | |
| 80. | ಸ್ಥಳೀಯ ಉತ್ಪನ್ನಗಳಿಂದ ಮೌಲ್ಯವರ್ದಿತ ಆಹಾರ ತಯಾರಿ, ಬಳಕೆ ಹಾಗೂ ಮಾರಾಟ ಮಾಡುವಿಕೆ | |
| 81. | ವಿವಿಧ ಬೆಳೆಗಳ ಕೊಯ್ಲು ಹಾಗೂ ಕೊಯ್ಲಿನೋತ್ತರ ತಾಂತ್ರಿಕತೆಗಳು | |
| 82. | ಕೃಷಿ ವಸ್ತು ಪ್ರದರ್ಶನ ಮತ್ತು ವಿಚಾರ ಸಂಕೀರ್ಣ ಕಾರ್ಯಕ್ರಮಗಳನ್ನು ಆಯೋಜಿಸುವುದು | |
| 83. | ಬೆಳೆದ ಉತ್ಪನ್ನಗಳ ಮಾರಾಟ ಮಾಡಬಹುದಾದ ಪ್ರಮಾಣದ ನಿರ್ಧಾರ, ಮಾರಾಟ ಮಾಡಬಹುದಾದ ಸ್ಥಳಗಳು ಹಾಗೂ ಸಂಬಂಧಿಸಿದ ವಿಷಯಗಳು | |
| 84. | ಕೇಂದ್ರ ಅಥವಾ ವಿದ್ಯಾರ್ಥಿಗಳಿಗೆ ವಿವಿಧ ಇಲಾಖೆಗಳ ಸಹಯೋಗದೊಂದಿಗೆ ರೈತ ಸಂಪರ್ಕ ಇರುವ ಹಳ್ಳಿಯಲ್ಲಿ ಕೃಷಿ ವಸ್ತು ಪ್ರದರ್ಶನ ಏರ್ಪಡಿಸುವುದು | |

ಮೇಲಿನ ಪಟ್ಟಿಯಲ್ಲಿ ನಮೂದಿಸಿರುವ ಚಟುವಟಿಕೆಗಳನ್ನು ಪ್ರತಿ ರೈತ ಸಂಪರ್ಕ ಕೇಂದ್ರಗಳಲ್ಲಿ ನಿಯೋಜಿಸಿರುವ ವಿದ್ಯಾರ್ಥಿಗಳು ಸಂದರ್ಭಕ್ಕೆ ತಕ್ಕಂತೆ ಅಗತ್ಯಕ್ಕನುಗುಣವಾಗಿ ಬದಲಾವಣೆ ಮಾಡಿಕೊಂಡು ಕೃಷಿ ವಿಶ್ವವಿದ್ಯಾನಿಲಯದ ವಿಷಯ ತಜ್ಞರ ಮತ್ತು ರೈತ ಸಂಪರ್ಕ ಕೇಂದ್ರದ ಅಧಿಕಾರಿಗಳ ಸಹಕಾರದಿಂದ ಕಾರ್ಯರೂಪಕ್ಕೆ ತರತಕ್ಕದ್ದು.

* ಬಿ.ಟೆಕ್. (ಕೃಷಿ ಇಂಜಿನಿಯರಿಂಗ್) ವಿದ್ಯಾರ್ಥಿಗಳು ದಿನಾಂಕ 16.08.21 ರಿಂದ 12.09.21 ರವರೆಗೆ ಗ್ರಾಮಗಳಲ್ಲಿ ಪ್ರಾಯೋಗಿಕ ವಿಸ್ತರಣಾ ಕಾರ್ಯಕ್ರಮದಲ್ಲಿ ಭಾಗವಹಿಸುತ್ತಾರೆ. ಬಿ.ಎಸ್ಸಿ. (ಆನರ್ಸ್) ಕೃಷಿ ಮಾರಾಟ ಮತ್ತು ಸಹಕಾರ ವಿದ್ಯಾರ್ಥಿಗಳು ದಿನಾಂಕ 23.09.21 ರಿಂದ 24.10.21 ರವರೆಗೆ ಗ್ರಾಮಗಳಲ್ಲಿ ಪ್ರಾಯೋಗಿಕ ವಿಸ್ತರಣಾ ಕಾರ್ಯಕ್ರಮದಲ್ಲಿ ಭಾಗವಹಿಸುತ್ತಾರೆ.

ದಿನಾಂಕ: 31.07.21 ಡೀನ್ (ಕೃಷಿ)

ಪ್ರತಿಗಳು ಇವರಿಗೆ:

1. ಪ್ರಾಧ್ಯಾಪಕರು ಹಾಗೂ ಮುಖ್ಯಸ್ಥರು, ಕೃಷಿ ವಿಸ್ತರಣಾ ವಿಭಾಗ, ಕೃಷಿ ಮಾರಾಟ ಹಾಗೂ ಸಹಕಾರ ವಿಭಾಗ ಮತ್ತು ಕೃಷಿ ಇಂಜಿನಿಯರಿಂಗ್ ವಿಭಾಗ, ಕೃಷಿ ಕಾಲೇಜು, ಜಿ.ಕೆ.ವಿ.ಕೆ., ಬೆಂಗಳೂರು.
2. ಸಂಬಂಧ ಪಟ್ಟ ಎಲ್ಲಾ ಉಪನ್ಯಾಸಕರಿಗೆ/ವಿದ್ಯಾರ್ಥಿಗಳಿಗೆ.